# 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ. 23647/2019

| | |
|---|---|
| ಸಾಕ್ಷಿದಾರರ ಹೆಸರು | ಕೃಷ್ಣಮೂರ್ತಿ |
| ತಂದೆಯ ಹೆಸರು | ರಾಜೇಂದ್ರ |
| ವಯಸ್ಸು | 42 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ | ನೆಲಗದರನಹಳ್ಳಿ, ಗೃಹಲಕ್ಷ್ಮಿ ಲೇಔಟ್, ಬೆಂಗಳೂರು. |
| ಪ್ರಮಾಣೀಕರಿಸಿದ ದಿನಾಂಕ | 08/01/2024 |

**ಮುಖ್ಯ ವಿಚಾರಣೆ : ಪ್ರಭಾರ ಹಿ.ಸ ಸ. ಅಭಿಯೋಜಕರವರಿಂದ :**

ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನನಗೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯ್ತು)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

2. ಗಂಗಮಾರಯ್ಯ ರವರಿಗೆ 6 ಜನ ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಗಂಗಮಾರಯ್ಯ ರವರ ಹೆಸರಿನಲ್ಲಿ ಸರ್ವೆ ನಂ. 98/2 ರಲ್ಲಿ 22 ಗುಂಟೆ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಕೆಂಪಯ್ಯ ರವರು ಗೃಹಲಕ್ಷ್ಮಿ ಲೇಔಟ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗೃಹಲಕ್ಷ್ಮಿ ಲೇಔಟ್ ಇವರು ಸದರಿ

ಲೇಔಟ್ ನಲ್ಲಿ ಸೈಟಗಳನ್ನು ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ಕುರಿತು ಸಿವಿಲ್ ನ್ಯಾಯಾಲಯದಲ್ಲಿ ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಯ್ಯ ರವರ ಮಗಬಸವರಾಜ ರವರು ಸೈಟ ನಂ. 540/ಎ ಸೈಟ್ ನ್ನು ದಿನಾಂಕ 17/06/2006 ರಂದು ರೂ.40,200/- ರೂಪಾಗಳಿಗೆ ಮಾರಾಟ ಮಾಡಿದ್ದು, 6 ತಿಂಗಳ ನಂತರ ಅದೇ ಸೈಟ್ ನ್ನು ದಿನಾಂಕ 07/12/2006 ರಂದು ಬಸವರಾಜ ರವರು ಪ್ರಕಾಶ ನಗರದ ಟಿ.ಎನ್, ಗೌಡ ರವರಿಗೆ ರೂ.6,70,000/- ಮೊತ್ತಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಬಸವರಾಜ ಹಾಗೂ ಗೃಹಲಕ್ಷ್ಮಿ ಸಂಘದವರು ಶಾಮೀಲಾಗಿ ಮೋಸ ಮಾಡುವ ಉದ್ದೇಶದಿಂದ ಈ ರೀತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 21/09/2018 ರಂದು ಟಿ.ಎ. ಗೌಡ ರವರು ಸೈಟ ಬಳಿ ಕಂಪೌಂಡ ಕಟ್ಟಲು ಬಂದಾಗ ನಾನು, ಕೃಷ್ಣ ಮೂರ್ತಿ, ವೆಂಕಟರಮಣಪ್ಪ ರವರು ಅವರಿಗೆ ಈ ಜಮೀನು ಗೃಹಲಕ್ಷ್ಮಿ ಬಡಾವಣೆಗೆ ಸಂಬಂದಪಟ್ಟಿದ್ದಲ್ಲ, ಈ ಸೈಟ್ ತಮಗೆ ಸೇರಿದ್ದು ಎಂದು ಹೇಳಿದೆವು ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 24/12/2018 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-3 ಎಂದು, ಹೇಳಿಕೆಯ ಭಾಗವನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3(ಎ) ರಂತೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಿಪಿ-3(ಎ) ರಂತೆ ಹೇಳಿಕೆ ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಎಮ್.ಜಿ.ಕೆ. ವಕೀಲರಿಂದ ಏನು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**